[Govt. of Karnataka C.R.P. 67]

| Deposition Sheets (RP.No.57) Form No.4 (Civil) | IN THE COURT OF CIVIL JUDGE & J.M.F.C., KARKALA. Criminal Case No. 533/2024 |
|---|---|

...................................................Vs....................................

ಪಿ.ಡಬ್ಲ್ಯು : 7 ಸಿ.ಡಬ್ಲ್ಯು : 19

ಸಾಕ್ಷಿದಾರನ ಹೆಸರು : ಸುಂದರ ಗೌಡ

ತಂದೆಯ ಹೆಸರು : ದಿ. ಪೂವಪ್ಪಗೌಡ

ಪ್ರಾಯ : 50 ವರ್ಷ

ಉದ್ಯೋಗ : ಮುಖ್ಯ ಪೇದೆ

ವಾಸ : ಮಂಗಳೂರು

ದಿನಾಂಕ 05.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರು:-

ನಾನು 2021 ರಿಂದ ಕಾರ್ಕಳ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ25.01.2024 ರಂದು ರಾತ್ರಿ 8.45 ಗಂಟೆಗೆ ನಾನು ಕಾರ್ಕಳ ಗ್ರಾಮಾಂತರ ಠಾಣೆಯಲ್ಲಿ ರಾತ್ರಿ ಪ್ರಭಾರ ಕರ್ತವ್ಯದಲ್ಲಿರುವಾಗ ಠಾಣೆಯಲ್ಲಿ ದಾಖಲಾದ ಅಕ್ರ ನಂ. 12/24 ಕಲಂ 279, 337 ಐಪಿಸಿ ಪ್ರಕರಣದಲ್ಲಿ ಗಾಯಾಳು ಮರಿಯಾ ಫೆರ್ನಾಂಡಿಸ್ ಮೃತಪಟ್ಟ ಬಗ್ಗೆ ಕೆ ಎಂ ಸಿ ಆಸ್ಪತ್ರೆಯಿಂದ ಮಣಿಪಾಲ್ ಪೊಲೀಸ್ ಠಾಣೆಯವರು ಕಾರ್ಕಳ ಗ್ರಾಮಾಂತರ ಪೋಲಿಸ್ ಠಾಣೆಗೆ ಗೆ ಇ-ಮೆಲ್ ಮುಖಾಂತರ ಕಳುಹಿಸಿಕೊಟ್ಟ ಮರಣ ಸೂಚನಾ ಪತ್ರವನ್ನು ಸ್ವೀಕರಿಸಿ ಕಲಂ 279, 304(ಎ) ಐಪಿಸಿ ಪರಿವರ್ತಿಸಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಈಗ ನಾನು ಮರಣ ಸೂಚನಾ ಪತ್ರವನ್ನು ನೋಡಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಷದ್ರಿ ದಾಖಲೆಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಈಗ ನಾನು ಕಲಂ 304(ಎ) ಗೆ ಪರಿವರ್ತಿಸಿದ ವರದಿಯನ್ನು ನೋಡಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದ್ರಿ ದಾಖಲೆಯನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಂ ಕೆ ವಿ ಕೆ ವಕೀಲರಿಂದಃ ಏನು ಇಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ